ಬೂಕನಕೆರೆ ವಿಜೇಂದ್ರ, ಮೈಸೂರು

ಹೆಣ್ಣು ಮಕ್ಕಳಿಗೇಕೆ ನಾಯಿಗಳನ್ನು ಕಂಡರೆ ಬಲು ಇಷ್ಟ?



ಫೋನ್ ನಂಬರ್ ಕೇಳದೆ, ಲವ್ ಲೆಟರ್ ನೀಡದೆ, ಬಾಲ ಅಲ್ಲಾಡಿಸುತ್ತವಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಈ ದೇಶದಲ್ಲಿ ಮಾರಾಟಕ್ಕಿಲ್ಲದ ವಸ್ತು ಯಾವುದು?

ಸದ್ಯದಲ್ಲಂತೂ ಬ್ಲಾಟಿಂಗ್ ಪೇಪರ್, ಬೀಸುವ ಕಲ್ಲು, ವಾಲ್ವ್ ರೇಡಿಯೊ...

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ

ಅಂತರಂಗದ ದೀಪ ಬೆಳಗುವುದು ಯಾವಾಗ ಗುರುಗಳೇ?

ಅನ್ಯರ ಕಷ್ಟವೆಂಬ ಟಂಗ್‌ಸ್ಟನ್‌ಗೆ ಅನುಕಂಪವೆಂಬ ವಿದ್ಯುತ್ ತಾಕಿದಾಗ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಜನ ಬಂದರೆ ಊರೆಲ್ಲಾ ಹಬ್ಬ. ಮಕ್ಕಳು ಬಂದರೆ ಮನೆಯೆಲ್ಲಾ ಹಬ್ಬ. ಮಂತ್ರಿಗಳು ಬಂದರೆ?



ಊರು ಕೇರಿ ಎಲ್ಲಾ ಗಬ್ಬೋ ಗಬ್ಬಾ!

ಮಹಾವೀರ ಕಾಸರ, ಶಿವಮೊಗ್ಗ

ವಯಸ್ಸು 50 ದಾಟಿದ್ದರೂ ವರಿಸಿರದವಳನ್ನು ಆಂಟಿ ಎಂದು ಕರೆಯಬಹುದೆ?

ಕರೆಯಿರಿ. ಆಕೆಗೆ ಸರಿಯೆನಿಸಿದರೆ 'ಹೋ' ಎನ್ನುತ್ತಾಳೆ, ಇಲ್ಲವಾದರೆ 'ಹೋಗೋ' ಎನ್ನುತ್ತಾಳೆ.

ಜಗದೀಶ ಬಿ. ಹೊಸೂರು, ಮೈಸೂರು

ತಿಳಿವಳಿಕೆ ಇರುವವರೇ ಅಹಂ ಬೆಳೆಸಿಕೊಂಡರೆ ಆಗುವ ಪರಿಣಾಮವೇನು?

ಇದ್ದ ತಿಳಿವಳಿಕೆ ತಿಳಿಯಾಗಿದೆ ಎಂದು ಇತರರಿಗೆ ತಿಳಿಯುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ

ವಾಮಮಾರ್ಗದಲ್ಲಿ ಇರುವ ವಾಮ ಯಾರು?

ವಾ—ವಾಸ್ತವವನ್ನು; ಮ—ಮರೆಮಾಚುವವರು.

ಮೃತ್ಯುಂಜಯ ಎ., ಪಾಂಡವಪುರ

ಲೋಕದ ಡೊಂಕನ್ನು ತಿದ್ದಲು ಏನು ಅರ್ಹತೆ ಇರಬೇಕು?

ಡೊಂಕರಿಗೆ ನೋವಾಗದಂತೆ ನೇರವಾಗಿಸುವ ಜಾಣ್ಮೆ ಇರಬೇಕು.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಅಪಘಾತಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಪ್ರಯಾಣ ಮಾಡುವುದೆಂದರೆ ಭಯವಾಗುವುದೇ ಸರ್?

ಅಪಘಾತ ಆಗುವ ವಾಹನಗಳಿಗಿಂತ ಆಗದವೇ ಹೆಚ್ಚು ಎಂದುಕೊಂಡಾಗ ಭಯವಾಗದು.

ಹೆಚ್.ವಿ. ಶ್ರೀಧರ್, ಬೆಂಗಳೂರು

ಬೆಂಗಳೂರಿನ ಫ್ರೀಡಂ ಪಾರ್ಕ್ ರಸ್ತೆಯಲ್ಲಿ ವಾಹನ ಸವಾರರಿಗೆ ಎಂದೂ ಫ್ರೀಡಂ ಇಲ್ಲವಲ್ಲ?

'ಫ್ರೀ' ಅರ್ಥಾತ್ 'ಬಿಡುವು' ಎನ್ನುವುದು ಢಂ ಆಗಿರುವ ರಸ್ತೆಯೇ ಫ್ರೀಢಂ ರಸ್ತೆಯಂತೆ.

ಶ್ರೀನಿವಾಸ ಕೆ, ಬೆಂಗಳೂರು

ಮಹಿಳೆಯರು ಬಾಲ್ಡಿ ಆಗುವುದಿಲ್ಲ. ಅವರ ತಲೆಯಲ್ಲಿ ಅಂತಹ ಪೂರಕ ಅಂಶ ಏನಿದೆ?

ಪುರುಷರ ತಲೆ ತಿನ್ನುವುದು ಕೇಶವರ್ಧನೆಗೆ ಕಾರಣ ಎಂಬ ವದಂತಿಯಿದೆ.

ಚಂದ್ರಶೇಖರ್ ಕೆ, ಬೆಂಗಳೂರು

ಇಂಗ್ಲಿಷಲ್ಲಿ ಟೀನೇಜ್ 13ರಿಂದ 19. ಕನ್ನಡದಲ್ಲಿ ಹದಿಹರೆಯ 13 ರಿಂದ 18. ಇಲ್ಲೇಕೆ ಒಂದು ವರ್ಷ ಕಡಿಮೆ?

ಉಚ್ಚಾರವೇ ಆಧಾರ. ಆಂಗ್ಲದಲ್ಲಿ 7 ಟೀನ್; ಕನ್ನಡದಲ್ಲಿ 19 'ಹದಿಯೊಂಬತ್ತು' ಅಲ್ಲವಲ್ಲ.

ಮುರಲೀಧರ ಕುಲಕರ್ಣಿ, ಬೀದರ್

ಸೂರಿನಲ್ಲಿರುವ ಫ್ಯಾನಿಗೂ, ಚಿತ್ರನಟರ ಫ್ಯಾನುಗಳಿಗೂ ಏನು ವ್ಯತ್ಯಾಸ?

ಈ ಫ್ಯಾನು ಕೆಟ್ಟರೆ ಕೊಠಡಿಯಲ್ಲಷ್ಟೇ ಸೆಕೆ. ಆ ಫ್ಯಾನುಗಳು ಕೆಟ್ಟರೆ ಊರೆಲ್ಲ ಉರಿ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು

ಅತಿಯಾದ ತಂತ್ರಜ್ಞಾನ ವಿನಾಶಕ್ಕೆ ಕಾರಣ ಆಗುತ್ತಾ?

ನಿಮ್ಮಲ್ಲಿ ಹೆಚ್ಚು ಚಾಕು ಇದ್ದರೆ ಕೊಲೆ ಮಾಡುವಿರೆ? ವಿನಾಶಕ್ಕೆ ಕಾರಣ ವಿಜ್ಞಾನವಲ್ಲ, ವಿಕೃತಿ.

ಬಿದರಹಳ್ಳಿ ವಿಜಯ, ಹಿರೇಹಡಗಲಿ

ಪುಣ್ಯಕ್ಕೂ, ಭಾಗ್ಯಕ್ಕೂ ಇರುವ ವ್ಯತ್ಯಾಸವೇನು?

ಭಾಗ್ಯ ಎರವಲು; ಪುಣ್ಯ ಸಂಪಾದನೆ.

ಭಾರತೀ ಗಂಗಾಧರ್, ಬೆಂಗಳೂರು

ಜನ ಈಗ ನಗುವುದನ್ನೇ ಮರೆತಿದ್ದಾರಲ್ಲ?

ವಿವಿಧ ರಾಜಕಾರಣಿಗಳ ಪೆದ್ದು ಭಾಷಣಗಳ ಮರುಪ್ರಸಾರದಿಂದ ಪರಿಸ್ಥಿತಿ ಸುಧಾರಿಸೀತು.

ರಾಜೀವ್ ಎನ್. ಮಾಗಲ್, ಸಕಲೇಶಪುರ

ತೀರಿಕೊಂಡ ಮೇಲೆ ಅದ್ದೂರಿಯಿಂದ ತಿಥಿ ಮಾಡದಿದ್ದರೆ ದೆವ್ವವಾಗಿ ಕಾಡುವರಂತೆ. ಹೌದಾ?



ನಿಜ. ಆದರೆ ತೀರಿದವರಲ್ಲ, ಆಪ್ತೇಷ್ಟರೇ ದೆವ್ವದಂತೆ ಕಾಡುತ್ತಾರೆ.

ಪಿ. ಶಂಕರಪ್ಪ, ಶಿವಮೊಗ್ಗ

ಇಂದು ಹೆಚ್ಚಿನ ಅಧಿಕಾರಿಗಳು ತಮ್ಮ ಸ್ವಾಭಿಮಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿರಲು ಕಾರಣ?

ಸ್ವಾಭಿಮಾನಕ್ಕಿಂತ ಸ್ಥಾನಮಾನ ದೊಡ್ಡದು ಎಂಬ ಧೋರಣೆ.

ಬಾ.ರಂ ಸುರೇಶ್, ಶಿವಮೊಗ್ಗ

ನಾಯಿ ಕಚ್ಚಿದರೆ 14 ಇಂಜೆಕ್ಷನ್. ಹೆಂಡತಿ ಕಚ್ಚಿದರೆ?

ಕೋರ್ಟಿನಿಂದ ಇಂಜಂಕ್ಷನ್.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ

ಪರಂಗಿಗಳು ನಮ್ಮ ಜನಕ್ಕೆ ಬಿಟ್ಟುಹೋದದ್ದೇನು?

ಪಂಚೆ, ಶಲ್ಯದ ಬದಲಿಗೆ ಪ್ಯಾಂಟು, ಅಂಗಿ.

■ **ರಾಮ್**